ಮೀಯುತ್ತಿದ್ದ ಆ ಹೆಣ್ಣು ಜೀವವನ್ನು ಒಮ್ಮೆಲೇ ಭಾವನಾತ್ಮಕವಾಗಿ ಆಸ್ಫೋಟಕ ಪರಿಸ್ಥಿತಿಗೆ ತಳ್ಳುವುದು ಬೇಡವೆಂದು ಜೀನತ್ ನಿರ್ಧರಿಸಿ ತನ್ನ ಆಲೋಚನೆಗಳ ಹುಚ್ಚು ಕುದುರೆಯ ನಾಗಾಲೋಟವನ್ನು ಪ್ರಯತ್ನಪಟ್ಟು ತಡೆದಳು. ಹೀಗಾಗಿ ವರಾನ್ವೇಷಣೆಯ ಅವಳ ಕೈಂಕರ್ಯ ಎಂದಿನಂತೆಯೇ ಮುಂದುವರೆಯಿತು. ಯಾರ ಮರ್ಜಿಗೂ ಒಳಗಾಗದ ತೆನೆಯಂತೆ ನಸೀಮ ನಳನಳಿಸಿದಳು.

ಅವಳ ಆಂತರ್ಯದ ಬೇಗುದಿಯನ್ನು ಅರಿಯುವ ಯಾವ ಹೃದಯವು ಕೂಡಾ ಹತ್ತಿರದಲ್ಲಿ ಇರಲಿಲ್ಲ. ಹೀಗಾಗಿ ಅವಳು ಧೈರ್ಯಗುಂದಿದಳು ಮತ್ತೆ ಸ್ಥೈರ್ಯವನ್ನು ಹಿಗ್ಗಿಸಿಕೊಂಡಳು. ಹೋರಾಟದಂತಹ ಹುಡುಕಾಟದಲ್ಲಿ ಜೀನತ್‌ಗೆ ಒದಗಿ ಬಂದವನೇ ಸಮೀರ್ ಅಹಮದ್. ಓದು, ಅನುಭವ, ಕಾರ್ಯ, ಕೌಶಲ್ಯ ಎಂದು ಹೇಳಿಕೊಳ್ಳುವಂತಹ ಯಾವ ಹಿನ್ನೆಲೆಯೂ ಅವನಿಗಿರಲಿಲ್ಲ. ಆರು ತಿಂಗಳಿನಿಂದ ಅನೀಸ್‌ನ ಬಿಸಿನೆಸ್‌ನಲ್ಲಿ ಸಹಾಯಕನಾಗಿ ಸೇರಿಕೊಂಡಿದ್ದ. ವೃದ್ಧ ತಾಯಿ ಒಬ್ಬಳನ್ನು ಬಿಟ್ಟರೆ ಅವನಿಗೆ ಹೆಚ್ಚಿನ ಸಂಬಂಧಿಗಳು ಕೂಡ ಇರಲಿಲ್ಲ. ಆದರೆ ದೃಷ್ಟಿ ತಾಗುವಷ್ಟು ಅಂದವಾಗಿದ್ದ ಸಮೀರ್‌ನತ್ತ ಜೀನತ್ ಆಕರ್ಷಿತಳಾಗಿ ಬಿಟ್ಟಳು. ಅವಳು ತನ್ನ ಮನೆಯ ಪಕ್ಕದ ಸೈಟಿನತ್ತ ದೃಷ್ಟಿಯನ್ನು ಹಾಯಿಸಿದ್ದು ಕೂಡ ನಸೀಮಾಳನ್ನು ಸಮೀರ್‌ಗೆ ಮದುವೆ ಮಾಡಿ ಆಕೆಯನ್ನು ಕಣ್ಣೆದುರಿನಲ್ಲಿಯೇ ಇರಿಸಿಕೊಳ್ಳಬೇಕು ಎಂಬ ಮಹದಾಸೆಯಿಂದ. ಮತ್ತು ತನ್ನ ಮನೆಯ ಪಕ್ಕದಲ್ಲಿಯೇ ಒಂದು ಸುಮಾರಾದ ಮನೆಯನ್ನು ಅವಳಿಗಾಗಿ ನಿರ್ಮಿಸಿ, ತನ್ನ ಬಳಿಯಲ್ಲಿಯೇ ಇರಿಸಿಕೊಳ್ಳಬೇಕೆಂದು ಅವಳು ನಿಶ್ಚಯಿಸಿದಳು.

ಗಂಡ ಮತ್ತು ಮಕ್ಕಳ ದುಡಿಮೆಯ ದೆಸೆಯಿಂದ ಜೀನತ್‌ಳ ಕೈಯಲ್ಲಿ ಹಣದ ವಹಿವಾಟು ಜೋರಾಗಿಯೇ ನಡೆಯುತ್ತಿತ್ತು. ವ್ಯವಹಾರದಲ್ಲಿ ಅವಳಿಗಿದ್ದ ದೂರದೃಷ್ಟಿಯ ದೆಸೆಯಿಂದ ಅವಳು

